ಪುರುಷೋತ್ತಮರಾಯರು ಕಾನೂನಿನ ಪೇಚಿನಲ್ಲಿ ಸಿಕ್ಕು ಒದ್ದಾಡುತ್ತಿದ್ದವರಿಗೆ ಕಾನೂನಿನ ಸಲಹೆ ನೀಡುತ್ತಿದ್ದರೆ, ಮಗಳ ಮದುವೆಗೆ ಕಾಸಿಲ್ಲದೆ ಪರದಾಡುತ್ತಿರುವವರಿಗೆ ಕಾಸು ಕೊಟ್ಟು ಸಹಾಯ ಮಾಡುತ್ತಿದ್ದರು. ಕಷ್ಟ ನಷ್ಟಗಳಿಗೆ ಒಳಗಾದವರಿಗೆ ನೆರವು ನೀಡಿ ಮೇಲೆತ್ತುವ ಅವರ ಸ್ವಭಾವ ಆದರ್ಶಪ್ರಾಯವಾಗಿತ್ತು. ಯಾರೇ ಕಷ್ಟಕಾಲದಲ್ಲಿ ಪುರುಷೋತ್ತಮರಾಯರ ಮೊರೆ ಹೋದರೆ ಅವರಿಂದ ನಿರಾಶರಾಗಿ ಹೋಗುತ್ತಿರಲಿಲ್ಲ. ತಮ್ಮ ಮನೆಗೆ ಒಂದು ಹೆಣ್ಣು ತರುವುದಾದರೂ ಬಡವರ ಮನೆಯಿಂದಲೇ ತರುತ್ತಿದ್ದರು. ಆದರೆ ವಧು ಪರೀಕ್ಷೆಯ ಸಂದರ್ಭದಲ್ಲಿ ಮಾತ್ರ ಕುಲೀನತೆ, ಸೌಜನ್ಯ ನೋಡುತ್ತಿದ್ದರು. ಇದನ್ನೆಲ್ಲ ನೆನೆದಾಗ ಲಕ್ಷ್ಮೀಬಾಯಿಯ ಮಾತು ಸುಳ್ಳಾಗಲಿಕ್ಕಿಲ್ಲ ಎಂಬ ಭರವಸೆ ನಾರಾಯಣರಾಯರಲ್ಲಿ ಮೂಡಿತ್ತು. ತನ್ನ ಪತ್ನಿ ನೀಡಿದ ಸಲಹೆಯನ್ನು ಸ್ವೀಕರಿಸಿ ಕೃತಜ್ಞತೆಯಿಂದ ಮುಗುಳು ನಕ್ಕರು.

ಅಷ್ಟರಲ್ಲಿ ನಡುಮನೆಯಿಂದ ತುಳಸಿ ಬಂದಳು. ಅವಳನ್ನು ನೋಡಿದಾಗ ನಾರಾಯಣರಾಯರಲ್ಲಿದ್ದ ಕೊರಗು ಮರುಕಳಿಸಿತು. ಅವಳ ಮೈಮಾಟ, ಮುಖ ಲಕ್ಷಣ ಯಾರಿಗೂ ಕಡಮೆಯಿರಲಿಲ್ಲ. ಲಕ್ಷಣವಾದ ಹುಡುಗಿ ಕಾಲಿಟ್ಟ ಮನೆಗೆ ಸಂಪತ್ತು ತಾನಾಗಿ ಬಂದು ಸೇರುತ್ತದೆ. ಆದರೆ ಇದೆಲ್ಲ ಯಾರಿಗೆ, ಯಾಕೆ ಹೇಳಬೇಕು? ಶ್ರೀಮಂತರಿಗಿದೆಲ್ಲ ಹೇಗೆ ಅರ್ಥವಾಗುತ್ತದೆ? ಅವರು ಹುಡುಕುವುದು ದುಡ್ಡು. ವೈಭವದ ಹಕ್ಕಿಗೆ ಔದಾರ್ಯದ ರೆಕ್ಕೆಗಳಿರಬೇಕು. ಮದುವೆಗೆ ಮುಂಚೆ ಮೈನೆರೆದರಂತೂ ಕೇಳುವುದೇ ಬೇಡ.

ಅತ್ಯಂತ ಶ್ರೀಮಂತ ಮನೆತನದವರಾದ ನಾರಾಯಣರಾಯರಿಗೆ ಈ ಬಡತನ, ದಾರಿದ್ರ್ಯ ಏಕೆ ಬಂತು? ಅವರು ಜೂಜು ಆಡಿದರೆ? ಹೆಂಡ ಕುಡಿದರೆ? ವ್ಯಭಿಚಾರ ಮಾಡಿದರೆ? ದುಂದುವೆಚ್ಚ ಮಾಡಿದರೆ? ಛೆ... ಛೇ... ಅವರೆಂದು ಅನಾದರ್ಶ ಕಾರ್ಯಗಳಿಗೆ ಕೈಹಾಕಿದವರಲ್ಲ. ಮೊದಲಿನಿಂದಲೂ ನಡೆಸಿಕೊಂಡು ಬಂದ ದಾನಧರ್ಮವೇ ಈ ಸ್ಥಿತಿಗೆ ಕಾರಣವಾಗಿತ್ತು. ಔದಾರ್ಯದ ಭರದಲ್ಲಿ ರೈತರಿಗೆ ಭೂಮಿ ಕೊಟ್ಟು ಖಾತೆ ಮಾಡಿಸಿಕೊಟ್ಟಿದ್ದರು. ಕೈಯಲ್ಲಿದ್ದ ಹಣದಿಂದ ಒಬ್ಬೊಬ್ಬ ಮಗಳ ಮದುವೆ ಮಾಡಿ ಮುಗಿಸಿದ್ದರು. ಸಾಲ ಕೇಳಲು ಬಂದವರಿಗೆ ಬರಿಗೈಯಿಂದ ಕಳಿಸಲಿಲ್ಲ.... ಕೇಳುವವರು ಹೆಚ್ಚಾದರು. ಕೊಟ್ಟ ಸಾಲ ವಾಪಸ್ಸು ಬರಲಿಲ್ಲ. ಕೊಟ್ಟಷ್ಟು ಸಾಲದಾಯಿತು. ಇದ್ದದ್ದು ಒಂದೊಂದಾಗಿ ಕರಗತೊಡಗಿತು. ಮನೆತನದ ಗೌರವ, ಘನತೆ, ಪರಂಪರೆ ಕಾಪಾಡುವುದಕ್ಕೆ ಹಣ ಖರ್ಚಾಯಿತು. ತನ್ನ ಏಕೈಕ ಮಗಳ ಮದುವೆಗೆ ಇನ್ನೊಬ್ಬರ ಮುಂದೆ ಹಲ್ಲುಗಿಂಜುವ ಪರಿಸ್ಥಿತಿ ಉಂಟಾಗಿತ್ತು.

ತುಳಸಿಯನ್ನು ಹತ್ತಿರ ಕರೆದು ಎದೆಗವಚಿಕೊಂಡು ತಲೆಯ ಮೇಲಿಂದ ಕೈಯಾಡಿಸಿದರು. ಹೃದಯ ತುಂಬಿ ಬಂತು. ಮಾತು ಹೊರಡಲಿಲ್ಲ. ರಾಯರು ಒಂದು ಕ್ಷಣವೂ ನಿಲ್ಲದೆ ಅಲ್ಲಿಂದ ಹೊರಟರು.

ಹಿಂದೆ ಮೇಣೆಯಲ್ಲಿ ಕುಳಿತು ಕಾರಭಾರಿಳೊಡನೆ ಹೋಗುತ್ತಿದ್ದ ನಾರಾಯಣರಾಯರು ಇಂದು ಬರಿಗಾಲಿನಲ್ಲಿ ಬಿರುಬಿಸಿಲಿನಲ್ಲಿ ನಡೆದು ಹೋಗುತ್ತಿದ್ದುನ್ನು ನೋಡಿ ಲಕ್ಷ್ಮೀಬಾಯಿಯ ಕಣ್ಣು ಒದ್ದೆಯಾಯಿತು.

ಪುರುಷೋತ್ತಮರಾಯರು ಮನೆಯಲ್ಲಿರಲಿಲ್ಲ, ಮಂಗೇಶಿಗೆ ಹೋಗಿದ್ದರು. ಅವರ ಜೊತೆಗೆ ಅವರ ಕಿರಿಯ ಮಗನೂ ಹೋಗಿದ್ದ. ಹಿರಿಯ ಮಗ ಪಣಜಿಗೆ ಹೋಗಿದ್ದ. ಅವರಿಲ್ಲದಿದ್ದರೂ ನಾರಾಯಣರಾಯರಿಗೆ ಯಥೋಚಿತ ಸ್ವಾಗತ ಸಿಕ್ಕಿತು. ನಾರಾಯಣರಾಯರೇನು ಆ ಮನೆಗೆ ಹೊಸಬರಲ್ಲ, ಅಲ್ಲಿ ಆತಿಥ್ಯಕ್ಕೇನೂ ಕೊರತೆಯಿರಲಿಲ್ಲ.

ರಾಯರನ್ನು ನೋಡಿ ಕಾರಭಾರಿಗಳು ಓಡಿ ಬಂದರು. 'ಯಜಮಾನರು ಮನೆಯಲ್ಲಿ ಇಲ್ಲದಿದ್ದರೂ ಮಧ್ಯಾಹ್ನದ ಊಟ ಮಾಡಿಯೇ ಹೋಗಬೇಕೆಂದು ಒತ್ತಾಯ ಮಾಡಿದರು. ತಂಪು ಪಾನೀಯ ತಂದು ಕೊಟ್ಟರು.